**All India Radio: Bangalore**
**National Bulletins In Kannada**
**20.05.2025 / 1.10PM**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**20.05.2025 / 1.10PM**

**<><*<><>*><>**

ಮುಖ್ಯಾಂಶಗಳು

**<><*<><>*><>**

೧. ಅಮೃತ ಭಾರತ ರೈಲ್ವೆ ನಿಲ್ದಾಣ ಯೋಜನೆ: ನಾಡಿದ್ದು ಪ್ರಧಾನಿಯಿಂದ ೧೦೩ ನಿಲ್ದಾಣಗಳ ಲೋಕಾರ್ಪಣೆ

೨. ಕಣ್ಣಿನ ರೋಗ ಟ್ರಾಕೋಮಾ ನಿರ್ಮೂಲನೆಗಾಗಿ ಭಾರತಕ್ಕೆ ವಿಶ್ವ ಆರೋಗ್ಯ ಸಂಸ್ಥೆ ಪ್ರಮಾಣಪತ್ರ

೩. ಇಂಧನ ಭದ್ರತೆ ಪ್ರಮುಖ ಜಾಗತಿಕ ಸವಾಲು: ಕೇಂದ್ರ ಸಚಿವ ಮನೋಹರ ಲಾಲ್

೪. ಐಪಿಎಲ್ ಟಿ-೨೦ ಕ್ರಿಕೆಟ್ : ಚೆನ್ನೈ ಸೂಪರ್ ಕಿಂಗ್ಸ್, ರಾಜಸ್ಥಾನ್ ರಾಯಲ್ಸ್ ನಡುವೆ ಹಣಾಹಣಿ

**<><*<><>*><>**

ಅಮೃತ ಭಾರತ ರೈಲ್ವೆ ನಿಲ್ದಾಣ ಯೋಜನೆಯಡಿ ಮೊದಲ ಹಂತದಲ್ಲಿ ೫೦೦ ರೈಲ್ವೆ ನಿಲ್ದಾಣಗಳ ನವೀಕರಣ ಕಾಮಗಾರಿ ಆರಂಭವಾಗಿದ್ದು, ಸದ್ಯ ಕಾಮಗಾರಿ ಪೂರ್ಣಗೊಂಡ ನೈರುತ್ಯ ರೈಲ್ವೆ ವಲಯದ ೫ ರೈಲ್ವೆ ನಿಲ್ದಾಣಗಳು ಸೇರಿದಂತೆ ದೇಶದ ೧೦೩ ರೈಲ್ವೆ ನಿಲ್ದಾಣಗಳನ್ನು ಪ್ರಧಾನಿ ನರೇಂದ್ರ ಮೋದಿ, ಮೇ ೨೨ರಂದು ವರ್ಚುವಲ್ ಮೂಲಕ ಲೋಕಾರ್ಪಣೆ ಮಾಡಲಿದ್ದಾರೆ

ನೈರುತ್ಯ ರೈಲ್ವೆ ವಲಯದ ೫ ನಿಲ್ದಾಣಗಳು ನವೀಕರಣಗೊಂಡಿದ್ದು, ಗೋಕಾಕ, ಧಾರವಾಡ, ಮುನಿರಾಬಾದ್, ಗದಗ, ಬಾಗಲಕೋಟ ರೈಲು ನಿಲ್ದಾಣಗಳು ಇದರಲ್ಲಿ ಸೇರಿವೆ.

<><*<><>*><>

ಜಿನೀವಾದಲ್ಲಿ ನಡೆದ ೭೮ನೇ ವಿಶ್ವ ಆರೋಗ್ಯ ಸಭೆಯಲ್ಲಿ ವಿಶ್ವ ಆರೋಗ್ಯ ಸಂಸ್ಥೆ, ಸಾರ್ವಜನಿಕ ಕಣ್ಣಿನ ಆರೋಗ್ಯ ಸಮಸ್ಯೆಯಾಗಿರುವ ಟ್ರಾಕೋಮಾ ನಿರ್ಮೂಲನೆಗಾಗಿ ಭಾರತಕ್ಕೆ ಪ್ರಮಾಣಪತ್ರ ನೀಡಿದೆ.

ಈ ಆರೋಗ್ಯ ಸಮಸ್ಯೆ ನಿರ್ಮೂಲನೆಯಲ್ಲಿ ಸಾಧನೆ ಮಾಡಿದ ಆಗ್ನೇಯ ಏಷ್ಯಾ ಪ್ರದೇಶದ ಮೂರನೇ ದೇಶ ಭಾರತವಾಗಿದೆ.

ಈ ರೋಗ ನಿರ್ಮೂಲನೆ, ತಡೆಗಟ್ಟುವ, ಎಲ್ಲರಿಗೂ ಆರೋಗ್ಯ ಖಾತ್ರಿ ಪಡಿಸುವ ಬದ್ಧತೆಯಲ್ಲಿ ಭಾರತದ ನಿರಂತರ ಪ್ರಯತ್ನಗಳಿಗೆ ಪ್ರಮಾಣ ಪತ್ರ ಸಾಕ್ಷಿಯಾಗಿದೆ. ಕಳೆದ ವರ್ಷ ಅಕ್ಟೋಬರ್ ೮ ರಂದು, ಭಾರತ ಸರ್ಕಾರ ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿರುವ ಟ್ರಾಕೋಮಾ ನಿರ್ಮೂಲನೆ ಮಾಡಿದೆ ಎಂದು ಡಬ್ಲ್ಯೂ.ಹೆಚ್.ಒ. ಘೋಷಿಸಿತ್ತು.

ಕಣ್ಣಿನ ಕಾಯಿಲೆ ಟ್ರಾಕೋಮಾ ನಿರ್ಮೂಲನೆಗಾಗಿ ಸರ್ಕಾರ ರಾಷ್ಟ್ರೀಯ ಕುರುಡುತನ ಮತ್ತು ದೃಷ್ಟಿಹೀನತೆ ನಿಯಂತ್ರಣ ಕಾರ್ಯಕ್ರಮ ಅಡಿಯಲ್ಲಿ ವಿವಿಧ ಕ್ರಮಗಳನ್ನು ತೆಗೆದುಕೊಂಡಿದೆ.

೨೦೧೯ ರಿಂದ, ಈ ಸಂಬಂಧ ರಾಷ್ಟ್ರೀಯ ಕಾರ್ಯಕ್ರಮ ದೇಶದ ಎಲ್ಲಾ ಜಿಲ್ಲೆಗಳಿಂದ ಪ್ರಕರಣಗಳ ವರದಿ ಸಂಗ್ರಹಿಸುವ ಮೂಲಕ ಟ್ರಾಕೋಮಾ ಪ್ರಕರಣಗಳ ಮೇಲೆ ನಿರಂತರ ಕಣ್ಗಾವಲು ಅಭಿವೃದ್ಧಿಪಡಿಸಿದೆ.

೨೦೨೧-೨೪ರ ಅವಧಿಯಲ್ಲಿ ದೇಶದ ೨೦೦ ಸ್ಥಳೀಯ ಜಿಲ್ಲೆಗಳಲ್ಲಿ ರಾಷ್ಟ್ರೀಯ ಟ್ರಾಕೋಮ್ಯಾಟಸ್ ಟ್ರೈಚಿಯಾಸಿಸ್ ಸಮೀಕ್ಷೆಯನ್ನು ನಡೆಸಲಾಯಿತು, ಇದು ಡಬ್ಲ್ಯೂಹೆಚ್ಒ ನಿಗದಿಪಡಿಸಿದ ಆದೇಶವಾಗಿತ್ತು.

<><*<><>*><>

ಆಪರೇಷನ್ ಸಿಂದೂರ್ ಕುರಿತು ಜಗತ್ತಿನ ಮುಂದೆ ಬಿಚ್ಚಿಡುವ ರಾಜತಾಂತ್ರಿಕ ಸಂಪರ್ಕಕ್ಕೆ ಮುನ್ನ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್‌ಮಿಸ್ರಿ ಇಂದು ಸಂಸತ್ ಸದಸ್ಯರ ನಿಯೋಗವೊಂದಕ್ಕೆ ಮಾಹಿತಿ ನೀಡಲಿದ್ದಾರೆ. ಆಪರೇಷನ್ ಸಿಂದೂರ್ ನಂತರ ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆಯ ವಿರುದ್ಧ ಭಾರತದ ದೃಢ ನಿಲುವನ್ನು ಜಾಗತಿಕ ಸಮುದಾಯದ ಮುಂದಿಡಲು ಸರ್ಕಾರ ವಿವಿಧ ದೇಶಗಳಿಗೆ ಬಹುಪಕ್ಷ ನಿಯೋಗಗಳನ್ನು ಕಳುಹಿಸುವುದಾಗಿ ಘೋಷಿಸಿತ್ತು. ಇಂತಹ ಏಳು ನಿಯೋಗಗಳು ಈ ತಿಂಗಳ ಕೊನೆಯಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸದಸ್ಯ ರಾಷ್ಟ್ರಗಳು ಸೇರಿದಂತೆ ಪ್ರಮುಖ ಪಾಲುದಾರ ದೇಶಗಳಿಗೆ ಭೇಟಿ ನೀಡಲಿವೆ. ಈ ನಿಯೋಗಗಳು ವಿವಿಧ ರಾಜಕೀಯ ಪಕ್ಷಗಳ

ಸಂಸತ್ ಸದಸ್ಯರು, ಪ್ರಮುಖ ರಾಜಕೀಯ ವ್ಯಕ್ತಿಗಳು ಮತ್ತು ಗಣ್ಯ ರಾಜತಾಂತ್ರಿಕರನ್ನು ಒಳಗೊಂಡಿದೆ. ಕಾಂಗ್ರೆಸ್ ಸಂಸದ ಶಶಿ ತರೂರ್, ಬಿಜೆಪಿ ಸಂಸದ ರವಿಶಂಕರ್ ಪ್ರಸಾದ್, ಜೆಡಿಯು ಸಂಸದ ಸಂಜಯ್ ಕುಮಾರ್ ಝಾ, ಬಿಜೆಪಿ ಸಂಸದ ಬೈಜಯಂತ್ ಪಾಂಡಾ, ಡಿಎಂಕೆ ಸಂಸದೆ ಕನಿಮೋಳಿ ಕರುಣಾನಿಧಿ, ಎನ್‌ಸಿಪಿ ಸಂಸದ ಸುಪ್ರಿಯಾ ಸುಳೆ ಹಾಗೂ ಶಿವಸೇನಾ ಸಂಸದ ಶ್ರೀಕಾಂತ್ ಏಕನಾಥ್ ಶಿಂಧೆ ಈ ನಿಯೋಗಗಳ ನೇತೃತ್ವ ವಹಿಸಲಿದ್ದಾರೆ. ಈ ತಂಡಗಳು ಭಾರತದ ರಾಷ್ಟ್ರೀಯ ಒಮ್ಮತ ಮತ್ತು ಎಲ್ಲ ರೀತಿಯ ಭಯೋತ್ಪಾದನೆಯನ್ನು ಎದುರಿಸಲು ದೃಢ ನಿಶ್ಚಯದ ವಿಧಾನವನ್ನು ಪ್ರದರ್ಶಿಸುತ್ತವೆ. ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆಯ ಭಾರತದ ಬಲಿಷ್ಟ ಸಂದೇಶವನ್ನು ಅಂತಾರರಾಷ್ಟ್ರೀಯ ಸಮುದಾಯಕ್ಕೆ ರವಾನಿಸಲಿದ್ದಾರೆ.

<><*<><>*<>

ಉಪ ರಾಷ್ಟ್ರಪತಿ ಜಗದೀಪ್ ಧನ್ ಕರ್ ಇಂದಿನಿಂದ ಮೂರು ದಿನಗಳ ಕಾಲ ಗೋವಾ ಪ್ರವಾಸ ಕೈಗೊಳ್ಳಲಿದ್ದಾರೆ.

ಉಪ ರಾಷ್ಟ್ರಪತಿ ನಾಳೆ ಮರ್ಮ ಗೋವಾ ಬಂದರಿಗೆ ಭೇಟಿ ನೀಡಲಿದ್ದು, ಬಂದರಿನಲ್ಲಿ ಕೈಗೆತ್ತಿಕೊಂಡಿರುವ ನೂತನ ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡಲಿದ್ದಾರೆ.

ಇದೇ ಸಂದರ್ಭದಲ್ಲಿ ಅವರು, ಮರ್ಮ ಗೋವಾ ಬಂದರು ಪ್ರಾಧಿಕಾರದ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಸಂವಾದ ನಡೆಸಲಿದ್ದಾರೆ. ಅಲ್ಲದೆ, ಬಂದರಿನಲ್ಲಿ ಕರಾವಳಿ ಕಾವಲು ಪಡೆಯ ಹಡಗಿನಲ್ಲಿ ಭಾರತೀಯ ಕರಾವಳಿ ಕಾವಲು ಪಡೆಯ ಹಿರಿಯ ಅಧಿಕಾರಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

ನಾಡಿದ್ದು ಗುರುವಾರ, ಜಗದೀಪ್ ಧನ್‌ಕರ್ ಅವರು ಕೇಂದ್ರೀಯ ಕರಾವಳಿ ಕೃಷಿ ಸಂಶೋಧನಾ ಸಂಸ್ಥೆ - ಋಅಂಖ ಗೆ ಭೇಟಿ ನೀಡಿ, ಅಲ್ಲಿನ ಬೋಧನಾ ಸಿಬ್ಬಂದಿ ಮತ್ತು ವಿಜ್ಞಾನಿಗಳೊಂದಿಗೆ ಮಾತುಕತೆ ನಡೆಸಲಿದ್ದಾರೆ. ಬಳಿಕ ಅವರು ರಾಜಭವನಕ್ಕೆ ಭೇಟಿ ನೀಡಲಿದ್ದು, ಆಯುರ್ವೇದ ಚಿಕಿತ್ಸಾ ಪದ್ಧತಿಗೆ ನೀಡಿರುವ ಕೊಡುಗೆಯನ್ನು ಶ್ಲಾಘಿಸುವ ಸಲುವಾಗಿ ಪ್ರತಿಷ್ಠಾಪಿಸಿರುವ ಚರಕ ಮತ್ತು ಶುಶ್ರೂತ ಪ್ರತಿಮೆಗಳನ್ನು ಅನಾವರಣಗೊಳಿಸಲಿದ್ದಾರೆ.

<><*<><>*<>

ಬ್ರೆಜಿಲ್‌ನಲ್ಲಿ ನಡೆದ ಬ್ರಿಕ್ಸ್ ಇಂಧನ ಸಚಿವರ ಸಭೆಯಲ್ಲಿ ಭಾರತದ ನಿಯೋಗದ ನೇತೃತ್ವ ವಹಿಸಿದ್ದ ಕೇಂದ್ರ ಇಂಧನ ಸಚಿವ ಮನೋಹರ್ ಲಾಲ್, ಇಂಧನ ಭದ್ರತೆ ಒಂದು ಪ್ರಮುಖ ಜಾಗತಿಕ ಸವಾಲಾಗಿದೆ ಎಂದು ಒತ್ತಿ ಹೇಳಿದ್ದಾರೆ.

ಆರ್ಥಿಕ ಸ್ಥಿರತೆ, ಸುಸ್ಥಿರ ಅಭಿವೃದ್ಧಿಯನ್ನು ಖಾತರಿಪಡಿಸಿಕೊಳ್ಳಲು ಬ್ರಿಕ್ಸ್ ರಾಷ್ಟ್ರಗಳ ನಡುವಿನ ಸಹಕಾರದ ಮಹತ್ವವನ್ನು ಅವರು ವಿವರಿಸಿದ್ದಾರೆ.

ಸಭೆಯಲ್ಲಿ, ಸಚಿವರು ಭಾರತದ ಮಹತ್ವದ ಶುದ್ಧ ಇಂಧನ ವಲಯದಲ್ಲಿನ ಸಾಧನೆಗಳನ್ನು ವಿವರಿಸಿದರು. ವಿದ್ಯುತ್ ಉತ್ಪಾದನಾ ಸಾಮರ್ಥ್ಯ, ನವೀಕರಿಸಬಹುದಾದ ಇಂಧನ, ಹಸಿರು ಹೈಡ್ರೋಜನ್ ಹಾಗೂ ಎಲ್ಲರಿಗೂ ವಿದ್ಯುತ್ ಸಂಪರ್ಕ ಕಲ್ಪಿಸುವಲ್ಲಿ ಸಾಧಿಸಿರುವ ಪ್ರಗತಿಯನ್ನು ಅವರು ಎತ್ತಿ ತೋರಿಸಿದರು, ಎಲ್ಲರಿಗೂ ಕೈಗೆಟುಕುವ, ಸುರಕ್ಷಿತ ಮತ್ತು ಸುಸ್ಥಿರ ಇಂಧನವನ್ನು ಖಚಿತಪಡಿಸಿಕೊಳ್ಳುವ ಸಂಕಲ್ಪವನ್ನು ಪುನರುಚ್ಚರಿಸಿದರು.

೨೦೨೫ರ ವೇಳೆಗೆ ವಿದ್ಯುತ್ ಉತ್ಪಾದನಾ ಸಾಮರ್ಥ್ಯದಲ್ಲಿ ೯೦ ಪ್ರತಿಶತ ಹೆಚ್ಚಳ ಸಾಧಿಸಲಾಗಿದೆ. ೨೦೩೨ರ ವೇಳೆಗೆ ೯೦೦ ಗಿಗಾ ವ್ಯಾಟ್ ಗುರಿಯೊಂದಿಗೆ ಸೌರ ಮತ್ತು ಪವನ ಶಕ್ತಿಯ ವಿಶ್ವದ ಮೂರನೇ ಅತಿದೊಡ್ಡ ಉತ್ಪಾದಕ ರಾಷ್ಟ್ರವಾಗಿ ಭಾರತದ ಸ್ಥಾನ ಹೊಂದಲಿದೆ ಎಂದು ಆಶಯ ವ್ಯಕ್ತಪಡಿಸಿದರು. ಇಂಧನ ದಕ್ಷತೆ, ಹಸಿರು ಹೈಡ್ರೋಜನ್, ಪರಮಾಣು ಶಕ್ತಿ ಮತ್ತು ಜೈವಿಕ ಇಂಧನಗಳಿಗೆ ಭಾರತದ ಬದ್ಧತೆಯನ್ನು ಸಚಿವರು ಪುನರುಚ್ಚರಿಸಿದರು. ಭಾರತದ ೨೦೨೬ ರ ಇಂಧನ ಸಮಾವೇಶದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವರು ಬ್ರಿಕ್ಸ್ ರಾಷ್ಟ್ರಗಳನ್ನು ಆಹ್ವಾನಿಸಿದರು.

ಇಂಧನ ಭದ್ರತೆಯನ್ನು ಬಲಪಡಿಸಲು, ಮುಕ್ತ ಮತ್ತು ಸಮಗ್ರ ಇಂಧನ ಮಾರುಕಟ್ಟೆಗಳನ್ನು ಉತ್ತೇಜಿಸಲು ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಬೆಂಬಲಿಸಲು ಜಂಟಿ ಬದ್ಧತೆಯೊಂದಿಗೆ ಸಭೆ ಮುಕ್ತಾಯವಾಯಿತು. ಈ ವರ್ಷದ ಬ್ರಿಕ್ಸ್ ಇಂಧನ ಸಚಿವರ ಸಭೆಯ ವಿಷಯ " ಹೆಚ್ಚು ಸಮಗ್ರ ಮತ್ತು ಸುಸ್ಥಿರ ಆಡಳಿತಕ್ಕಾಗಿ ಜಾಗತಿಕ ದಕ್ಷಿಣ ಸಹಕಾರ ಬಲಪಡಿಸುವುದು" ಎಂಬುದಾಗಿತ್ತು.

ಬ್ರಿಕ್ಸ್ ಇಂಧನ ಸಚಿವರು, ಪ್ರತಿಯೊಂದು ಸದಸ್ಯ ದೇಶವು ತನ್ನದೇ ಆದ ಇಂಧನ ಪರಿವರ್ತನೆಯ ಮಾರ್ಗವನ್ನು ಅನುಸರಿಸುವ ಹಕ್ಕಿಗೆ ಬೆಂಬಲ ವ್ಯಕ್ತಪಡಿಸಿ, ವರ್ಧಿತ ರಿಯಾಯಿತಿ ಹಣಕಾಸುಗಾಗಿ ಕರೆ ನೀಡಿದರು. ಸುಸ್ಥಿರ ಇಂಧನ ಉಪಕ್ರಮಗಳನ್ನು ಮುನ್ನಡೆಸುವಲ್ಲಿ ಹೊಸ ಅಭಿವೃದ್ಧಿ ಬ್ಯಾಂಕಿನ

ಪಾತ್ರವನ್ನು ಬೆಂಬಲಿಸಿ, ನ್ಯಾಯಯುತ ಮತ್ತು ಪಾರದರ್ಶಕ ಜಾಗತಿಕ ಮಾನದಂಡಗಳೊಂದಿಗೆ ತಾಂತ್ರಿಕ ತಟಸ್ಥತೆಯನ್ನು ಪ್ರತಿಪಾದಿಸಿದರು.

<><*<><>*><>

ಪಂಜಾಬ್ ಗಡಿಯಲ್ಲಿರುವ ಮೂರು ಜಂಟಿ ಚೆಕ್ ಪೋಸ್ಟ್‌ಗಳಲ್ಲಿ ಇಂದಿನಿಂದ ರಿಟ್ರೀಟ್ ಸಮಾರಂಭ ಪುನರಾರಂಭಗೊಳ್ಳಲಿದೆ ಎಂದು ಗಡಿ ಭದ್ರತಾ ಪಡೆ ಘೋಷಿಸಿದೆ.

ಇಂದು ಮಾಧ್ಯಮಗಳ ಪ್ರತಿನಿಧಿಗಳಿಗೆ ಮಾತ್ರ ಅವಕಾಶವಿದ್ದು ನಾಳೆಯಿಂದ ಸಾರ್ವಜನಿಕರಿಗೂ ಅವಕಾಶ ಕಲ್ಪಿಸಲಾಗುವುದು ಎಂದು ಬಿ ಎಸ್ ಎಫ್ ಹೇಳಿದೆ.

ಈ ತಿಂಗಳ ೮ ರಂದು ಅಟಾರಿ, ಹುಸೇನಿವಾಲಾ ಮತ್ತು ಸದ್ಕಿಯಲ್ಲಿ ರಿಟ್ರೀಟ್ ಸಮಾರಂಭವನ್ನು ಸಾರ್ವಜನಿಕರಿಗೆ ರದ್ದುಗೊಳಿಸಲಾಗಿತ್ತು.

ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಆಪರೇಷನ್ ಸಿಂದೂರ್ ಕಾರ್ಯಾಚರಣೆ ನಡೆಸಿದ ಒಂದು ದಿನದ ನಂತರ ಸಮಾರಂಭವನ್ನು ಸ್ಥಗಿತಗೊಳಿಸುವ ನಿರ್ಧಾರವನ್ನು ತೆಗೆದುಕೊಳ್ಳಲಾಗಿತ್ತು.

ಪಹಲ್ಗಾಮ್‌ನಲ್ಲಿ ನಡೆದ ಬರ್ಬರ ಭಯೋತ್ಪಾದಕ ದಾಳಿಯಲ್ಲಿ ೨೬ ಮಂದಿ ಸಾವನ್ನಪ್ಪಿದ್ದರು. ದಾಳಿಗೆ ಪ್ರತಿಕಾರವಾಗಿ ಆಪರೇಷನ್ ಸಿಂದೂರ್ ನಡೆಸಲಾಯಿತು.

<><*<><>*><>

ಲಕ್ನೋದಲ್ಲಿ ನಿನ್ನೆ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಐಪಿಎಲ್ ಟಿ ೨೦ ಕ್ರಿಕೆಟ್ ಪಂದ್ಯದಲ್ಲಿ , ಲಕ್ನೋ ಸೂಪರ್ ಜೈಂಟ್ಸ್ ತಂಡ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಆರು ವಿಕೆಟ್‌ಗಳಿಂದ ಸೋತು ಪ್ಲೇಆಫ್ ರೇಸ್‌ನಿಂದ ಹೊರಬಿದ್ದಿದೆ.

ಇಂದು, ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ರಾಜಸ್ಥಾನ ರಾಯಲ್ಸ್ ವಿರುದ್ಧ ಸೆಣಸಲಿದೆ. ಪಂದ್ಯ ಸಂಜೆ ೭:೩೦ ಕ್ಕೆ ಆರಂಭವಾಗಲಿದೆ.

<><*<><>*><>

ಹಿರಿಯ ಎನ್‌ಸಿಪಿ ನಾಯಕ ಛಗನ್‌ಭುಜಬಲ್  ಅವರು  ಇಂದು ಮಹಾರಾಷ್ಟ್ರದ ಮಹಾಯುತಿ   ಮೈತ್ರಿ ಸರ್ಕಾರದ  ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ರಾಜಭವನದಲ್ಲಿ  ನಡೆದ   ಸಮಾರಂಭದಲ್ಲಿ  ರಾಜ್ಯಪಾಲ ಸಿ ಪಿ ರಾಧಾಕೃಷ್ಣನ್  ಛಗನ್ ಭುಜಬಲ್ ಅವರಿಗೆ ಅಧಿಕಾರ ಮತ್ತು ಗೌಪ್ಯತೆಯ  ಪ್ರಮಾಣ ವಚನ ಬೋಧಿಸಿದರು.

<><*<><>*><>